**ದಿನಾಂಕ 06.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ: ಶ್ರೀ. ಸಿ.ಎನ್.ಸಿ. ವಕೀಲರಿಂದಃ-</u>**

ನನ್ನ ಸ್ವಂತ ಊರು ದೇವನೂರು ಆಗಿರುತ್ತದೆ. ವಾದಿಯರು ನನ್ನ ವಿರುದ್ಧ ಈ ದಾವೆಯನ್ನು ಏಕೆ ಸಲ್ಲಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ವಾದಿಯರಿಂದ ನಾವು ದಾವಾ ಆಸ್ತಿಯನ್ನು ಖರೀದಿಸಿರುವುದಿಲ್ಲ. ನಾನು ಸಲ್ಲಿಸಿರುವ ತಕರಾರಿನಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿರುತ್ತೇನೆ. 1 ನೇ ಪ್ರತಿವಾದಿಯಾದ ಬಾಯಮ್ಮ ನನಗೆ ಯಾರೆಂದು ತಿಳಿದಿರುತ್ತದೆ. 1 ನೇ ಪ್ರತಿವಾದಿಯು ಮೂಲತಃ ಟಿ.ಬಿ. ಕಾವಲಿನವರಾಗಿರುತ್ತಾರೆ. ಈಗ ಅವರು ಎಲ್ಲಿ ಇರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ.

ನಿಡಿ.1 ರ ಕ್ರಯಪತ್ರವನ್ನು ನಾನು ದಿನಾಂಕ 15.09.2014 ರಂದು 5 ನೇ ಪ್ರತಿವಾದಿಯಿಂದ ದಾವಾ ಆಸ್ತಿಯನ್ನು ಖರೀದಿಸಿ ನೊಂದಣಿ ಕ್ರಯಪತ್ರವನ್ನು ಮಾಡಿಸಿಕೊಂಡಿರುತ್ತೇನೆ. ದಾವಾ ಆಸ್ತಿಯು ಮೂಲತಃ ಯಾರಿಗೆ ಸೇರಿದ್ದು ಎಂದು ನಾನು ತಿಳಿದುಕೊಂಡು ನಂತರ ನಿಡಿ.1 ರಂತೆ ಕ್ರಯಪತ್ರವನ್ನು 5 ನೇ ಪ್ರತಿವಾದಿಯಿಂದ ಮಾಡಿಸಿಕೊಂಡಿರುತ್ತೇನೆ. 5 ನೇ ಪ್ರತಿವಾದಿಗೆ ದಾವಾ ಆಸ್ತಿಯು ಅವರ ತಂದೆಯಿಂದ ಬಂದಿರುತ್ತದೆ ಎಂದು ನಾನು ತಿಳಿದುಕೊಂಡಿರುತ್ತೇನೆ. 5 ನೇ ಪ್ರತಿವಾದಿಯ ತಂದೆಯ ಹೆಸರು ತುಂಬಾ ವರ್ಷಗಳಾಗಿದ್ದರಿಂದ ನನಗೆ ಈಗ ಹೇಳಲಾಗುವುದಿಲ್ಲ.

ಮೂಲತಃ ದಾವಾ ಆಸ್ತಿಯು ಕರಿಯಪ್ಪನವರಿಗೆ ಮಂಜೂರು ಆಗಿರುತ್ತದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಕರಿಯಪ್ಪನವರಿಗೆ ಮಂಜೂರಾದ ಪತ್ರವನ್ನು ನಾನು ನೋಡಿರುವುದಿಲ್ಲ ಮತ್ತು ಯಾವ ವರ್ಷದಲ್ಲಿ ಮಂಜೂರಾಗಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. 1 ನೇ ಪ್ರತಿವಾದಿಯು ಕರಿಯಪ್ಪನವರ ಹೆಂಡತಿಯಾಗಿರುತ್ತಾರೆ ಎಂದರೆ ಸರಿ. 2 ರಿಂದ 4 ನೇ ಪ್ರತಿವಾದಿಗಳು ಕರಿಯಪ್ಪನವರ ಮಕ್ಕಳಾಗಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಯು ಈಗ ಮರಣ ಹೊಂದಿರುತ್ತಾರೆ ಎಂದರೆ ಸರಿ. ಅವರು ತೀರಿಕೊಂಡಿರುವುದರಿಂದ ಅವರ ಹೆಂಡತಿ ಮಕ್ಕಳನ್ನು ಈ ದಾವಾ ಆಸ್ತಿಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿರುತ್ತದೆ ಎಂದರೆ ಸರಿ.

ಬಾಬಯ್ಯ ಮತ್ತು ಕರಿಯಪ್ಪನವರು ಒಬ್ಬರಿಗೊಬ್ಬರು ಸಂಬಂಧಿಕರಾಗಿರುವುದಿಲ್ಲ ಎಂದರೆ ಸರಿಯಲ್ಲ. ಬಾಬಯ್ಯ ಕರಿಯಪ್ಪನವರಿಗೆ ಏನಾಗಬೇಕು ಎಂದು ಬಹಳ ದಿನವಾಗಿದ್ದರಿಂದ ನನಗೆ ಹೇಳಲಾಗುವುದಿಲ್ಲ. ಬಾಬಯ್ಯನವರಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ನಾನು ದಾಖಲಾತಿಯನ್ನು ನೋಡಿರುವುದಿಲ್ಲ. ಸಾಮಾನ್ಯವಾಗಿ ಒಂದು ಆಸ್ತಿಯನ್ನು ಖರೀದಿಸಬೇಕಾದರೆ ಸದರಿ ಆಸ್ತಿಗೆ ಸಂಬಂಧಿಸಿಪಟ್ಟ ದಾಖಲಾತಿಗಳನ್ನು ಪರಿಶೀಲಿಸುತ್ತೇವೆ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ಖರೀದಿಸುವಾಗ ದಾಖಲಾತಿಗಳನ್ನು ಪರಿಶೀಲಿಸಿ ಕಾನೂನು ಸಲಹೆಗಳನ್ನು ಪಡೆದ ನಂತರ ದಾವಾ ಆಸ್ತಿಯನ್ನು ಖರೀದಿಸಿರುತ್ತೇನೆ. ಕಾನೂನು ಸಲಹೆಗಳನ್ನು ಪಡೆದಾಗ ವಕೀಲರು ನನಗೆ ಏನನ್ನು ಬರೆದುಕೊಟ್ಟಿರುವುದಿಲ್ಲ. ನಾನು ದಾವಾ ಆಸ್ತಿಯನ್ನು ಖರೀದಿಸುವಾಗ ವಕೀಲರಿಂದ ಕಾನೂನು ಸಲಹೆಗಳನ್ನು ಪಡೆದ ಬಗ್ಗೆ ನನ್ನ ಪ್ರಮಾಣಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ.

ಕರಿಯಪ್ಪ ಮತ್ತು ಬಾಬಯ್ಯನವರ ತಂದೆಯ ಹೆಸರು ಬಹಳವಾದ್ದರಿಂದ ನನಗೆ ಈಗ ಹೇಳಲಾಗುವುದಿಲ್ಲ. ಬಾಬಯ್ಯನವರ ತಂದೆಯ ಹೆಸರು ಕಾಳಯ್ಯ ಎಂಬುದಾಗಿದ್ದು, ಸದರಿ ಬಾಬಯ್ಯನವರಿಗೂ, ಉಳಿದ ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಗಳಿಗೆ ಸದರಿ ಬಾಬಯ್ಯನವರು ಸಂಬಂಧಿಕರಾಗಿರುತ್ತಾರೆ. ಯಾವ ಸಂಬಂಧ ಎಂಬ ಪ್ರಶ್ನೆಗೆ ಸದರಿ ಪ್ರತಿವಾದಿಗಳು ಬಾಬಯ್ಯನವರ ಅಣ್ಣನ ಮಕ್ಕಳಾಗಿರುತ್ತಾರೆ. ಆದ್ದರಿಂದ ಅವರನ್ನು ಕರೆಯಿಸಿ ಅವರುಗಳ ಸಹಿಗಳನ್ನು ನಾನು ಪಡೆದುಕೊಂಡಿರುತ್ತೇನೆ. ಪ್ರತಿವಾದಿಗಳು ಬಾಬಯ್ಯನವರ ಸಂಬಂಧಿಕರಾಗಿದ್ದರಿಂದ ಸಂಬಂಧಪಟ್ಟ ಇಲಾಖೆಯಿಂದ ವಂಶವೃಕ್ಷವನ್ನು ನೀಡುತ್ತಿದ್ದು, ಸದರಿ ವಂಶವೃಕ್ಷವನ್ನು ನಾನು ಹಾಜರುಪಡಿಸಿ ಕ್ರಯಪತ್ರವನ್ನು ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿ.

1 ರಿಂದ 4 ನೇ ಪ್ರತಿವಾದಿಯರನ್ನು 5 ನೇ ಪ್ರತಿವಾದಿ ಬಾಬಯ್ಯ ಅಲಿಯಾಸ್ ಬಾಬಣ್ಣನವರು ಕ್ರಯಪತ್ರದ ನೊಂದಣಿ ಸಮಯದಲ್ಲಿ ಕರೆದುಕೊಂಡು ಬಂದಿದ್ದರು, ಆಗ ಅವರನ್ನು ನಾನು ನೋಡಿರುತ್ತೇನೆ. ಅದಕ್ಕೂ ಮೊದಲು ನಾನು ಅವರು ಯಾರು ಎಂದು ತಿಳಿದುಕೊಂಡಿರುತ್ತೇನೆ. ಸಾಕ್ಷಿ ಮುಂದುವರೆದು ಮಾತುಕತೆಯಾಗುವಾಗಲೂ 1 ರಿಂದ 4 ನೇ ಪ್ರತಿವಾದಿಯರನ್ನು ಕರೆಸಿ ಮಾತುಕತೆ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ಅಂಶಗಳನ್ನು ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಾಗಲಿ ಅಥವಾ ಪ್ರತಿವಾದಪತ್ರದಲ್ಲಾಗಲಿ ನಮೂದಿಸಿರುವುದಿಲ್ಲ.

**(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ರವರು ಕಡೂರು.